1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

ಸಿಸಿ ನಂಃ 34/2020 cw1 pw1

ಸಾಕ್ಷಿದಾರರ ಹೆಸರು ಃ ನಿಂಗೇಗೌಡ
ತಂದೆಯ ಹೆಸರು ಃ ಸಿದ್ದೇಗೌಡ
ವಯಸ್ಸು ಃ 62
ಉದ್ಯೋಗ ಃ ನಿವೃತ್ತ ಅಬಕಾರಿ ನಿರೀಕ್ಷಕರು
ವಾಸ ಃ ಬೆಂಗಳೂರು

ಸಾಕ್ಷಿಯನ್ನು ದಿನಾಂಕಃ-13.11.2024 ರಂದು ಪ್ರಮಾಣ ಮಾಡಿಸಲಾಯಿತು
ಮುಖ್ಯ ವಿಚಾರಣೆಃ- ಶ್ರೀ ಸ.ಸ.ಅ. ರವರಿಂದ.

ನಾನು 2017 ರಿಂದ 2020 ರವರೆಗೆ ಮಳವಳ್ಳಿ ಅಬಕಾರಿ ಇಲಾಖೆಯಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನು.

1. ದಿನಾಂಕಃ-23.07.2019 ರಂದು ಬೆಳಗ್ಗೆ 6.45 ಕ್ಕೆ ಮಳವಳ್ಳಿ ರಸ್ತೆ ರಾಷ್ಟ್ರೀಯ ಹೆದ್ದಾರಿ ಜಂಟಿ ನಿರ್ದೇಶಕರ ಆದೇಶದ ಮೇರೆಗೆ ಸರ್ಕಾರಿ ವಾಹನದಲ್ಲಿ ಅಬಕಾರಿ ಜಂಟಿ ನಿರ್ದೇಶಕರ ನಿರ್ದೇಶನ ಮೇರೆಗೆ 3 -3.30 ಕ್ಕೆ ಕಛೇರಿ ಬಿಟ್ಟು ಬೆಳಗ್ಗೆ 6.30 ಕ್ಕೆ ಮಳವಳ್ಳಿ ವಲಯ ಅಬಕಾರಿ ನಿರೀಕ್ಷಕರು ಮತ್ತು ಸಿಬ್ಬಂದಿ ಜೊತೆ ಗಸ್ತು ಮಾಡುತ್ತಿದ್ದಾಗ ಮೇಲ್ಕಂಡ ಸ್ಥಳದಲ್ಲಿ ಒಬ್ಬ ವ್ಯಕ್ತಿ ಸೇಂದಿ ಮಾರಾಟ ಮಾಡುತ್ತಿದ್ದು ಕಂಡುಬಂದ ಮೇರೆಗೆ ನಮ್ಮ ಸಿಬ್ಬಂದಿಗಳ ಜೊತೆ ಗಸ್ತು ಮಾಡುತ್ತಿದ್ದ ಸಂದರ್ಭದಲ್ಲಿ ಸೇಂದ ಮಾರಾಟ ಮಾಡುತ್ತಿದ್ದ ವಿಚಾರ ಚಾಸಾ 6 , 7 ರವರಿಗೆ ತಿಳಿಸಿ ಜೂತೆಗೆ ಕರೆದುಕೊಂಡು ಹೋಗಿ ನೋಟಿಸು ಜಾರಿ ಮಾಡಿ ಶೋಧನ ವರದಿ ತಯಾರಿಸಿಕೊಂಡು ದಾಳಿ ಮಾಡಿದ ಸಂದರರ್ಬದಲ್ಲಿ ಅವರು ಒಪ್ಪಿಕೊಂಡ ನಂತರ ಕೃತ್ಯ ಸ್ಥಳದಲ್ಲಿ ಕರೆದುಕೊಂಡು ಹೋಗಿ ಪರಿಶೀಲಿಸಲಾಗಿ 20 ಲೀ ಪ್ಲಾಸ್ಟಿಕ್ ಕಾನಲ್ಲಿ ಮಾರಾಟ ಮಾಡುತ್ತಿದ್ದು ಕಂಡುಬಂದು ಆತನ ಹೆಸರು ವಿಳಾಸ ಕೇಳಲಾಗಿ ಚೆನ್ನಿಯಪ್ಪ ಎಂದು ತಿಳಿಸಿದ್ದು ಈ ರೀತಿ ಅಕ್ರಮವಾಗಿ ಸೇಂದಿ ಸಂಗ್ರಹ ಮಾಡಿ ಮಾರಾಟ ಮಾಡುತ್ತಿರುವುದು ಕರ್ನಾಟಕ ಅಬಕಾರಿ

ಕಾಯ್ದೆ ರೀತ್ಯ ಶಿಕ್ಷಾರ್ಹ ಅಪರಾಧ ಎಂದು ತಿಳಿಸಿ ಆರೋಪಿಯನ್ನು ಮತುತ ಸೇಂದಿಯನ್ನು ವಶಕ್ಕೆ ಪಡೆಯಲಾಯಿತು.

2. ಅದರಲ್ಲಿ 2 ಲೀ ಸೇಂದಿಯನ್ನು 2 ಲೀ ಬಾಟಲುನಲ್ಲಿ ತುಂಬಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ ಅಬಕಾರಿ ಸೀಲು ಮಾಡಲಾಯಿತು. ಪಂಚರ ಸಹಿ ಉಳ್ಳ ಚೀಟಿಗಳನ್ನು ಅದರ ಮೇಲೆ ಅಂಟಿಸಲಾಯಿತು. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಸ್ಥಳದಲ್ಲಿ ಬೆಳಗ್ಗೆ 6.45 ರಿಂದ 8.00 ವರೆಗೆ ಪಂಚರ ಸಮಕ್ಷಮ ಮಹಜರು ಜರುಗಿಸಲಾಯಿತು.

3. ಆರೋಪಿ ಮತ್ತು ಮಾಲುಗಳನ್ನು ವಶಕ್ಕೆ ಪಡೆದು ಠಾಣೆಗೆ ವಾಪಾಸು ಬಂದಿರುತ್ತೇವೆ. ನಂತರ ಅದೇ ದಿನ ಆರೋಪಿ ವಿರುದ್ಧ ಸ್ವ ಪಿರ್ಯಾದನ್ನು ತಯಾರಿಸಿ ಪ್ರಕರಣವನ್ನು ಆರೋಪಿ ವಿರುದ್ಧ ದಾಖಲಿಸಿ ಪ್ರ.ವ.ವ ಯನ್ನು ದಾಖಲಿಸಿಕೊಂಡ ನಂತರ ಅಮಾನತುಪಡಿಸಿಕೊಂಡ ಸೇಂದಿ ತುಂಬಿದ ಪ್ಲಾಸ್ಟಿಕ್ ಬಾಟಲನ್ನು ಠಾಣಾ ಮಾಲುಪಟ್ಟಿ ಸಂಖ್ಯೆ ನಮೂನೆ 3 ರಲ್ಲಿ ನಿವೇದಿಸಿಕೊಂಡಿರುತ್ತೇನೆ. ವಶಪಡಿಸಿಕೊಂಡ ಮಾಲುಗಳನ್ನು ಅಬಕಾರಿ ಉಪನಿರೀಕ್ಷಕರಿಗೆ ಕಳಿಸಲು ವಸ್ತುಗಳ ಪಟ್ಟಿಯಲ್ಲಿ ನಮೂದಿಸಿಕೊಳ್ಳಲಾಯಿತು.

4. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಮನವಿಯೊಂದಿಗೆ ಚಾಸಾ 8 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ನಿಪಿ 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಶೋಧನ ಸಮುಚಿತ ಆಧಾರ ನೋಡಿ ಗುರುತಿಸಿದ್ದು ನಿಪಿ 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಮಾದರಿ ಮೊಹರನ್ನು ನಿಪಿ 3 ಎಂದು , ಸಾಕ್ಷಿಯ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ಸ್ವ ಪಿರ್ಯಾದನ್ನು ನಿಪಿ 4 ಎಂದು , ಸಾಕ್ಷಿಯ ಸಹಿಯನ್ನು ನಿಪಿ 4 ಎ ಎಂದು ಗುರುತಿಸಲಾಯಿತು. ಪ್ರ.ವ.ವ ಯನ್ನು ನಿಪಿ 5 ಎಂದು , ಸಾಕ್ಷಿಯ ಸಹಿಯನ್ನು ನಿಪಿ 5 ಎ ಎಂದು ಗುರುತಿಸಲಾಯಿತು. ಸ್ವತ್ತಿನ ಮಾಲುಪಟ್ಟಿಯನ್ನು ನಿಪಿ 6 ಎಂದು , ಸಾಕ್ಷಿಯ

ಸಹಿಯನ್ನು ನಿಪಿ 6 ಎ ಎಂದು ಗುರುತಿಸಲಾಯಿತು. ಚಾಸ 8 ರವರಿಗೆ ಕಡತವನ್ನು ನೀಡುವ ಸಂದರ್ಭದಲ್ಲಿ ನೀಡಿರುವ ಮನವಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 7 ಎಂದು ಸಹಿಯನ್ನು ನಿಪಿ 7 ಎ ಎಂದು ಗುರುತಿಸಲಾಯಿತು. 457 ರೀತ್ಯ ವಶಪಡಿಸಿಕೊಂಡ ವಸ್ತುಗಳ ಪಟ್ಟಿಯನ್ನು ನಿಪಿ 8 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಲೀ ಪ್ಲಾಸ್ಟಿಕ್ ಬಾಟಲನ್ನು ನೋಡಿ ಗುರುತಿಸಿದ್ದು ಮುಮಾ 1 ಸಾಕ್ಷಿ ಸಹಿಯನ್ನು ನಿಪಿ 1 ಎ , ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ ಆರ್ ವಕೀಲರಿಂದಃ</u>

ರಾಜ್ಯ ವಿಚಕ್ಷಣ ದಳ ಬೆಂಗಳೂರು ಅವರು ನೀಡಿರುವ ಲಿಖಿತವಾಗಿ ನಿರ್ದೇಶನ ಕೊಟ್ಟಿರುವುದಿಲ್ಲ ಆದರೆ ಮೌಖಿಕ ಆದೇಶವನ್ನು ಮಾಡಿರುತ್ತಾರೆ. ಆದೇಶವುನೋಟಿಸು ಬೋರ್ಡ್‌ಲ್ಲಿ ಸಾಮಾನ್ಯವಾಗಿ ಹಾಕಿರುತ್ತಾರೆ. ಆದೇಶವನ್ನು ಯಾವ ದಿನಾಂಕ , ತಿಂಗಳು ವರ್ಷ ಮಾಡಿರುತ್ತಾರೆ ನನಗೆ ನೆನಪಿಲ್ಲ. ಬೆಂಗಳೂರಿನಲ್ಲಿ ನಾನು ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳದಲ್ಲಿ ಠಾಣ ದಿನಚರಿ ಇರುವುದಿಲ್ಲ ಗೌಪ್ಯವಾಗಿ ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಚಾಸ 2 , 3 ನಮ್ಮ ಇಲಾಖಾ ಸಿಬ್ಬಂದಿ ಎಂದರೆ ಸರಿ. ಬೆಂಗಳೂರನ್ನು 3.30 ಕೆ ಬಿಟ್ಟಿರುತ್ತೇವೆ ಸದರಿ ವಿಚಾರವನ್ನು ನಾವು ಪಿರ್ಯಾದಲ್ಲಿ ನಮೂದು ಮಾಡಿರುವುದಿಲ್ಲ ಗೌಪ್ಯವಾಗಿ ಇಟ್ಟುರುತ್ತೇವೆ ಎಂದು ಹೇಳುತ್ತಾರೆ. ಗೌಪ್ಯವಾಗಿ ಇರುವ ಸರ್ಕುಲರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಬೆಂಗಳೂರಿಂದ 4 ಇಲಾಖ ಸಿಬ್ಬಂದಿ ಹೊರಟಿರುತ್ತೇವೆ. ಬೆಂಗಳುರಿಂದ ಚಾಸ 2 , 3 ನಮ್ಮ ವಾಹನ ಚಾಲಕ ಕೃಷ್ಣಮೂರ್ತಿ ಇನ್ನು ಒಬ್ಬ ವ್ಯಕ್ತಿ ಹೊರಟಿರುತ್ತೇವೆ. ವಾಹನ ಚಾಲಕ ಕೃಷ್ಣಮೂರ್ತಿ ಹೆಸರು ನಮೂದು ಮಾಡಿರುವುದಿಲ್ಲ. ಸದರಿ ವ್ಯಕ್ತಿಯ ಹೆಸರು ತೋರಿಸಲು ನನಗೆ ತೊಂದರೆ ಇರಲಿಲ್ಲ.

ಮಳವಳ್ಳಿಗೆ ಬರಲು ಬೆಂಗಳೂರು ಮದ್ದೂರು ಮಾರ್ಗವಾಗಿ ಬಂದಿರುತ್ತೇವೆ. ಮಳವಳ್ಳಿ ತಲುಪಿದಾಗ ಬೆಳಗ್ಗೆ 6 ಗಂಟೆ ಆಗಿತ್ತು. ಮಳವಳ್ಳಿ ವಲಯ ತಲುಪಿದ ಮೇಲೆ ಸದರಿ ಠಾಣೆ ದಿನಚರಿಯಲ್ಲಿ ನಾವು ಬಂದಿರುವ ಬಗ್ಗೆ ನಮೂದು ಮಾಡಿಲ್ಲ ಸಾಕ್ಷಿ ಮುಂದುವರಿದು ನಾವು ಗುಪ್ತಚರಿ ಇಲಾಖೆ ಆಗಿರುವುದಿರಿಂದ ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ಮಳವಳ್ಳಿ ವಲಯದಲ್ಲಿ ಪ್ರೇಮ್ ಇಲಾಖಿ ಸಿಬ್ಬಂದಿ ಇದ್ದರು. ಪ್ರೇಮಸಾಗರ ಅವರನ್ನು ಘಟನ ಸ್ಥಳಕ್ಕೆ ನಮ್ಮ ಜೊತೆ ಕರೆದುಕೊಂಡು ಹೋಗಿರುತ್ತೇವೆ. ಮಾರಳ್ಳಿ ರಾಷ್ಟ್ರಿಯ ಹೆದ್ದಾರಿಂದ 1/2 ಕಿ ಮೀ ಇರುತ್ತದೆ. ಹೈವೆಯಿಂದ ಗುಡಿಸಲು 1/2 ಕಿ.ಮೀ ದೂರ ಇರುತ್ತದೆ. ಮಾರ್ಗಮಧ್ಯ ರಸ್ತೆಯಲ್ಲಿ ಹೋಗುವಾಗ ಗಸ್ತಿಗೆ ಹೋಗುವ ರಸ್ತೆ ಎಲ್ಲಿಗೆ ಹೋಗುತ್ತೆ ಗೊತ್ತಿಲ್ಲ. ಘಟನ ಸ್ಥಳವು ಲಕ್ಷ್ಮಿ ನರಸಿಂಹ ದೇವಸ್ಥಾನಕ್ಕೆ ಹೋಗುವ ಸ್ಥಳ ಎಂದರೆ ಸರಿ. ಸದರಿ ದೇವಸ್ಥಾನವು ಪ್ರಸಿದ್ದ ದೇವಸ್ಥಾನ ಎಂದರೆ ಸರಿ. ಸದರಿ ಸ್ಥಳದಲ್ಲಿ ಪೊಲೀಸರು ಮತ್ತು ಸಾರ್ವಜನಿಕರು ಪ್ರತಿದಿನ ಹಾಜರಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗುಡಿಸಲಿನ ಚಕ್ಕುಬಂದಿ ನನಗೆ ಗೊತ್ತು. ಸದರಿ ಚಕ್ಕುಬಂದಿ ಪೂರ್ವಕ್ಕೆ ರಾಷ್ಟ್ರಿಯ ಹೆದ್ದಾರಿ ಪಶ್ಚಿಮ ದೇವಸ್ಥಾನಕ್ಕೆ ಹೋಗುವ ದಾರಿ , ಉತ್ತರ ದಕ್ಷಿಣಕ್ಕೆ ತೆಂಗಿನ ತೋಟ ಇರುತ್ತದೆ. ಉತ್ತರ ದಕ್ಷಿಣೆ ದಿಕ್ಕಿನಲ್ಲಿರುವ ಆಸ್ತಿಯ ಮಾಲಿಕರ ಬಗ್ಗೆ ನಿಮಗೆ ತಿಳಿದುಕೊಳ್ಳಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ನಾವು ತನಿಖಾ ಇಲಾಖೆ ಆಗಿರುವುದರಿಂದ ಐಓ ಅವರು ಮಾಡುತ್ತಾರೆ ಎಂದು ಹೇಳುತ್ತಾರೆ. ಪಂಚರ ಸಾಕ್ಷಿಗಳು ರಾಷ್ಟ್ರಿಯ ಹೆದ್ದಾರಿಯಲ್ಲಿ ನಿಂತುಕೊಂಡಿದ್ದರು ಸದರಿ ಸಾಕ್ಷಿಗಳು ಮದ್ಯ ಸೇವಿಸಲು ಬಂದಿರುತ್ತಾರೆ. ಮದ್ಯ ಸೇವಿಸಲು 3- 4 ಜನ ಹಾಜರಿದ್ದರು. ಸದರಿ ವ್ಯಕ್ತಿಗಳ ಹೆಸರು ಹೇಳಲಾಗುವುದಿಲ್ಲ. ಗುಡಿಸಲು ಉತ್ತರ ದಕ್ಷಿಣ ಇರುತ್ತದೆ. ತಾತ್ಕಾಲಿಕ ಗುಡಿಸಲಿನ ಅಳತೆ ವಿಸ್ತೀರ್ಣ ಮಹಜರಲ್ಲಿ ನಮೂದು ಮಾಡಿಲ್ಲ. ಪಂಚರ ಸಾಕ್ಷಿಗಳು ಇತರ ಪ್ರಕರಣಕ್ಕೆ ಸಹಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ನಾನು ಠಾಣೆಯಲ್ಲಿ ಕುಳಿತುಕೊಂಡು ಮಹಜರು ಜರುಗಿಸಿ ಠಾಣೆಯಲ್ಲಿ ಮಹಜರು ಬರೆದಿರುತ್ತೇನೆ ಎಂದರೆ ಸರಿಯಲ್ಲ. ಪ್ರೇಮಸಾಗರ ವ್ಯಕ್ತಿಯ ಪಂಚರಾಗಿ ಸಾಕ್ಷಿಯಾಗಿ ಪಡೆದುಕೊಂಡಿಲ್ಲ. ತಾ ಅಂಕಿಅಂಶಗಳಿಗೋಸ್ಕರ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಎಂ ಒ 1 ಎಲ್ಲರು ನೀರು ಕುಡಿಯಲು

ಉಪಯೋಗಿಸುತ್ತಾರೆ ಎಂದರೆ ಸರಿ. ಮುಮ 1ನ್ನು ಪ್ರಯೋಗಾಲಯಕ್ಕೆ ಕಳಿಸಿಲ್ಲ ಎಂದರೆ ಸರಿಯಲ್ಲ.ವಾರಸುದಾರರಿಲ್ಲದ ಮಾಲುಗಳನ್ನು ಕಳಿಸಿ ಸುಳ್ಳು ವರದಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

**1ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ,**
**ಮಳವಳ್ಳಿ.**